O.S. NO. 16/2018
PW – 2 .
Dated 16-07-2026.

ಸಾಕ್ಷಿಯನ್ನು ಈ ದಿನ ದಿನಾಂಕ 16-07-2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು .

ಪಾಟಿ ಸವಾಲುಃ 10 ನೇ ಪ್ರತಿವಾದಿ ಪರವಾಗಿ ಶ್ರೀ ವಿ ಬಿ ಎ ವಕೀಲರಿಂದಃ

ಪ್ರಸ್ತುತ ದಾವೆಯಲ್ಲಿ ನಾನು ಪಕ್ಷಗಾರ ಇರುವುದಿಲ್ಲ ಎಂದರೆ ನನ್ನ ತಂದೆ ಮೂಲಕ ಇದ್ದೇನೆ ಎಂದು ನುಡಿದಿರುತ್ತಾರೆ. ನನ್ನ ತಂದೆ ದೈಹಿಕ ಸದೃಡ ಇದ್ದರು ಸಹ ಖೊಟ್ಟಿ ಪವರ ಆಪ ಅಟಾರ್ನಿ ಮಾಡಿಸಿಕೊಂಡು ಅವರ ಪರವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ವಯಕ್ತಿಕವಾಗಿ ದಾವಾ ಆಸ್ತಿಗಳ ಬಗ್ಗೆ ಮಾಹಿತಿ ಇಲ್ಲದೇ ಇದ್ದರು ಸಹ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದ ಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿದೆ. ದಾವಾ ಆಸ್ತಿಗಳ ಚಕ್ಕಬಂದಿ ಹೇಳಬಲ್ಲೆ. ಖೊದಾಪನಪೂರ ಗ್ರಾಮ ಸರ್ವೆ ನಂ. 55/ 5 ರ ಪೂರ್ವಕ್ಕೆ ನಮ್ಮದೇ ಜಮಿನು, ಪಶ್ಚಿಮಕ್ಕೆ ನಿರಿನ ಹಳ್ಳ, ಉತ್ತರಕ್ಕೆ ನಮ್ಮದೇ ಜಮಿನು ಇರುತ್ತದೆ. ದಕ್ಷಿಣದ ಚಕ್ಕಬಂದಿ ನನಗೆ ಈಗ ನೆನಪಿಗೆ ಬರುತ್ತಿಲ್ಲ.

ನಮ್ಮ ಮನೆತನ ಮೂಲ ಪುರುಷ ಬಸವಂತಪ್ಪ ಎಂದರೆ ನಿಜ. ಅವರಿಗೆ 5 ಜನ ಗಂಡು ಮಕ್ಕಳು ಮತ್ತು 4 ಜನ ಹೆಣ್ಣು ಮಕ್ಕಳು. ಸದರಿ ಸರ್ವೆ ನಂ. 55/ 5 ನ್ನು ನನ್ನ ಅಜ್ಜ ಬಸವಂತಪ್ಪ ಒಬ್ಬರೇ ಸ್ವಂತ ರೈತನಾತೆಯಿಂದ ಸಾಗುವಳಿ ಮಾಡುತ್ತಿದ್ದರು ಎಂದರೆ ಸಾಕ್ಷಿ ಎಲ್ಲರೂ ಸೇರಿ ಮಾಡುತ್ತಿದ್ದರು ಎಂದು ನುಡಿದಿರುತ್ತಾರೆ. ನನ್ನ ಅಜ್ಜ ಬಸವಂತಪ್ಪ ಒಬ್ಬರೇ

ಸಾಗುವಳಿ ಮಾಡುತಿದುದರಿಂದ ಸದರಿ ಸರ್ವೆ ನಂ. 55/ 5 ರಲ್ಲಿ ಇರುವ ಒಟ್ಟು 17 ಎಕರೆ 32 ಗುಂಟೆ ಪೈಕಿ 11 ಎಕರೆ ಜಮಿನು ಲ್ಯಾಂಡ ಟ್ರಿಬುನಲ ಬೈಲಹೊಂಗಲ ರವರು ನನ್ನ ಅಜ್ಜನಿಗೆ ಮಂಜೂರು ಮಾಡಿರುತ್ತಾರೆ ಎಂದರೆ ಸಾಕ್ಷಿ ಒಟ್ಟು ಕುಟುಂಬ ಸೇರಿಸಿ ಮಂಜೂರು ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ. ಹೀಗಾಗಿ ಸದರಿ 11 ಎಕರೆ ಆಸ್ತಿಯಲ್ಲಿ ನನ್ನ ಅಜ್ಜನಿಗೆ ಮಾತ್ರ ಮಾಲ್ಕಿ ಹಕ್ಕು ಇರುತ್ತದೆ ಎಂದರೆ ಎಲ್ಲರದು ಇರುತ್ತದೆ ಎಂದು ನುಡಿದಿರುತ್ತಾರೆ.

1994 ರಲ್ಲಿ ನನ್ನ ಅಜ್ಜ ತನ್ನ ಕುಟುಂಬದ ಜಮಿನುಗಳನ್ನು ತನ್ನ ಮಕ್ಕಳಿಗೆ ವಾಟ್ನಿ ಮಾಡಿ ಕೊಡುವಾಗ 6 ನೇ ಪ್ರತಿವಾದಿ ಪಾಲು ಕೇಳಿದಾಗ ಮುಂದೆ ಆಸ್ತಿ ಕೊಡುತ್ತೇನೆ ಎಂದು ಮುಂದುಡಿದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನನ್ನ ಅಜ್ಜ 6 ನೇ ಪ್ರತಿವಾದಿಗೆ ಲ್ಯಾಂಡ ಟ್ರಿಬುನಲದಿಂದ ತನಗೆ ಮಂಜೂರು ಮಾಡಿದ 11 ಎಕರೆ ಆಸ್ತಿಯಲ್ಲಿ ಪಾಲು ಕೊಡುತ್ತೇನೆ ಅಂತಾ ತಿಳಿಸಿದ್ದನು ಎಂದರೆ ಸರಿಯಲ್ಲ. 6 ನೇ ಪ್ರತಿವಾದಿಯನ್ನು 9 ನೇ ಪ್ರತಿವಾದಿಗೆ ಮದುವೆ ಮಾಡಿ ಕೊಟ್ಟಿರುತ್ತಾರೆ ಎಂದರೆ ಸರಿ. 6 ಮತ್ತು 9 ನೇ ಪ್ರತಿವಾದಿಯರು ತಮ್ಮ ಕುಟುಂಬಕ್ಕೆ ಸೇರಿದ ಅಸುಂಡಿ ಗ್ರಾಮದಲ್ಲಿ ಇರುವ ಆಸ್ತಿಗಳನ್ನು ಮಾರಾಟ ಮಾಡಿ ಪಟ್ಟಿಹಾಳಕ್ಕೆ ಬಂದು ವಾಸಿಸಬೇಕೆಂದು ತಿರ್ಮಾನಿಸಿದ್ದರು ಎಂದರೆ ಸರಿಯಲ್ಲ. 1994 ರಿಂದ 2000 ನೇ ಇಸ್ವಿಯಲ್ಲಿ ಬರಗಾಲ ಇತ್ತು ಎಂದರೆ ಸರಿಯಲ್ಲ. ಹೀಗಾಗಿ ನನ್ನ ಅಜ್ಜಿಗೆ ಆರ್ಥಿಕ ಅಡಚಣೆ ಉಂಟಾಗಿ ಕೆಲವೊಂದು ಜಮಿನು ಮಾರಾಟಕ್ಕೆ

ಹಚ್ಚಿದ್ದರು ಎಂದರೆ ಸರಿಯಲ್ಲ. ಸದರಿ ವಿಷಯ 9 ನೇ ಪ್ರತಿವಾದಿಗೆ ಗೊತ್ತಾಗಿ ತಾನು ಹಿರಿಯರ ಮೂಲಕ ನನ್ನ ಅಜ್ಜನಿಗೆ ಜಮಿನು ಖರೀದಿಸುವ ಬಗ್ಗೆ ವಿಚಾರಿಸಿದನು ಎಂದರೆ ಸರಿಯಲ್ಲ. ಹೀಗಾಗಿ ನನ್ನ ಅಜ್ಜ 9 ನೇ ಪ್ರತಿವಾದಿ ಯಿಂದ ರೂ. 50 ಸಾವಿರ ಮಾರಾಟದ ಹಣ ಪಡೆದುಕೊಂಡು 9 ಎಕರೆ ಆಸ್ತಿಯನ್ನು 6 ನೇ ಪ್ರತಿವಾದಿಗೆ ವಾಟ್ನಿ ಪ್ರಕಾರ ಬಿಟ್ಟು ಕೊಟ್ಟರು ಎಂದರೆ ಸರಿಯಲ್ಲ. ದಿನಾಂಕ 11–08–1994 ರಂದು ನನ್ನ ಅಜ್ಜ 6 ನೇ ಪ್ರತಿವಾದಿಗೆ ವಾಟ್ನಿ ಪತ್ರದ ಮೂಲಕ 9 ಎಕರೆ ಆಸ್ತಿ ಬಿಟ್ಟು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಾಟ್ನಿ ಪತ್ರವನ್ನು ನನ್ನ ಅಜ್ಜರವರೇ ಬಸವಂತಪ್ಪ ಸ್ವತ ಬರೆಯಿಸಿ ತಹಶಿಲ್ದಾರವರಿಗೆ ವರದಿಯೊಂದಿಗೆ ಸಲ್ಲಿಸಿದರು ಎಂದರೆ ಸರಿಯಲ್ಲ. ನನ್ನ ಶಿಕ್ಷಣ ಪಿಯುಸಿ ವರಗೆ ಆಗಿರುತ್ತದೆ . ಈಗ ತೋರಿಸಿದ ದೃಡೀಕೃತ ದಾಖಲೆ ನನ್ನ ಅಜ್ಜ ಬರೆದು ಕೊಟ್ಟಿರುವ ಸದರಿ ವಾಟ್ನಿ ಪತ್ರ ಇರುತ್ತದೆ ಎಂದರೆ ಖೊಟ್ಟಿ ಆಗಿ ಸೃಷ್ಟಿ ಮಾಡಿಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. ಸದರಿ ವಾಟ್ನಿ ಪತ್ರದಲ್ಲಿ ನನ್ನ ತಂದೆ ಮತ್ತು ಆತನ ಸಹೊದರರು ತಮ್ಮ ಒಪ್ಪಿಗೆ ಇರುತ್ತದೆ ಅಂತಾ ಒಪ್ಪಿಗೆ ಸಾಕ್ಷಿದರರು ಅಂತಾ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ ತಹಶಿಲ್ದಾರವರಿಗೆ ಸಲ್ಲಿಸಿದ ವರದಿಯಲ್ಲಿ ಸಹ ನನ್ನ ತಂದೆ ಮತ್ತು ಆತನ ಸಹೊದರರು ಎಲ್ಲರು ಒಪ್ಪಿಗೆ ಸೂಚಿಸಿ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವರದಿ ಪ್ರಕಾರ ನನ್ನ ತಂದೆ ಮತ್ತು ಆತನ ಸಹೊದರರಿಗೆ ಎಲ್ಲರಿಗೂ 'ಯು' ಪಾರ್ಮ ನೊಟಿಸು ಸಹ ಜಾರಿ ಆಗಿರುತ್ತವೆ ಎಂದರೆ ಸರಿಯಲ್ಲ. ಸದರಿ ವಾಟ್ನಿ ಪ್ರಕಾರ ಕೊಟ್ಟ ವರದಿಯಂತೆ ಮೂಟೇಶನ ನಂ. 2607 ಮಂಜೂರಾಗಿಯಿತು ಎಂದರೆ ಸರಿಯಲ್ಲ. ಸದರಿ

ಮೂಟೇಶನ ನಂ. 2607 ನಾವು ಯಾರು ಸಹ ಪ್ರಶ್ನಿಸಿರುವುದಿಲ್ಲ ಎಂದರೆ ನಮ್ಮ ಕುಟುಂಬದಲ್ಲಿ ಇಲ್ಲಿಯವರೆಗೆ ವಾಟ್ನಿ ಆಗದೇ ಇದುದ ರಿಂದ ಪ್ರಶ್ನಿಸಿರುವುದಿಲ್ಲ ಎಂದು ನುಡಿದಿರುತ್ತಾರೆ. 1994 ರಿಂದ 2015 ರವರೆಗೆ ಸರ್ವೆ ನಂ. 55/5 ಆಸ್ತಿ 6 ನೇ ಪ್ರತಿವಾದಿಯ ಮಾಲ್ಕಿ ಕಬ್ಜಾ ವಹಿವಾಟನಲ್ಲಿ ಮುಂದುವರೆದುಕೊಂಡು ಬಂದಿರುತ್ತದೆ ಎಂದರೆ ಸರಿಯಲ್ಲ. 2015 ರಲ್ಲಿ 6 ನೇ ಪ್ರತಿವಾದಿ ಸದರಿ ಜಮಿನು ಸರ್ವೆ ನಂ. 55/5 ರಲ್ಲಿ 4 ಎಕರೆ 3 ಗುಂಟೆ ಜಮಿನು ಮಾರಾಟಕ್ಕೆ ಹಚ್ಚಿದ್ದರು ಎಂದರೆ ಸರಿಯಲ್ಲ. ಸದರಿ ಮಾರಾಟಕ್ಕ ಹಚ್ಚಿದ ವಿಷಯ 10 ನೇ ಪ್ರತಿವಾದಿ ಗೆ ಗೊತ್ತಾಗಿ ಸದರಿ ಜಮಿನು ಖರೀದಿ ಮಾಡುವ ಮಾತುಕತೆಗೆ ಅವರ ಹಿರಿಯರ ಮೂಲಕ ಮಾತುಕತೆ ನಡಸಿದರು ಎಂದರೆ ಸರಿಯಲ್ಲ. ಸದರಿ 4 ಎಕರೆ 3 ಗುಂಟೆ ಜಮಿನುನ್ನು 10 ನೇ ಪ್ರತಿವಾದಿ ರೂ. 2 ಲಕ್ಷ 60 ಸಾವಿರಗಳಿಗೆ ದಿನಾಂಕ 25-03-2015 ರಂದು ನೊಂದಾಯಿತ ಕ್ರಯ ಪತ್ರದ ಮೂಲಕ ಖರೀದಿಸಿದರು ಎಂದರೆ ಅದು ಕಾನೂನು ಪ್ರಕಾರ ಖರೀದಿ ಆಗಿರುವುದಿಲ್ಲ ಎಂದು ನುಡಿದಿರುತ್ತಾರೆ. ಸದರಿ ಕ್ರಯ ಪತ್ರ ಕಿತ್ತೂರನ ಸಬ ರಜಿಸ್ಟರ ಕಚೇರಿಯಲ್ಲಿ ನೊಂದ ಆಗಿರುತ್ತದೆ ಎಂದರ ಖೊಟ್ಟಿ ಆಗಿ ಮಾಡಿಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. ಸದರಿ ಖರೀದಿ ಪತ್ರವನ್ನು ಇಲ್ಲಿಯವರೆಗೆ ಏಕೆ ಪ್ರಶ್ನಿಸಿಲ್ಲ ಎಂದರೆ ಸಾಕ್ಷಿ ನಮ್ಮ ಕುಟುಂಬದಲ್ಲಿ ವಾಟ್ನಿ ಆಗಿರಲಿಲ್ಲ ಹೀಗಾಗಿ ಪ್ರಶ್ನಿಸಿರುವುದಿಲ್ಲ ಎಂದು ನುಡಿದಿರುತ್ತಾರೆ. ಸದರಿ 10 ನೇ ಪ್ರತಿವಾದಿ ಖರೀದಿ ಪತ್ರ ಕಾನೂನು ಬದ್ದವಾಗಿದ್ದರಿಂದ ಅದನ್ನು ಎಲ್ಲಿಯೂ ಪ್ರಶ್ನಿಸಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ 10 ನೇ ಪ್ರತಿವಾದಿ ಖರೀದಿ ಪತ್ರದ ಮೂಲಕ ಸದರಿ ಆಸ್ತಿಯ ಮಾಲಿಕ

ಮತ್ತು ಕಬ್ಜಾದಾರರು ಇರುತ್ತಾರೆ ಎಂದರೆ ಸರಿಯಲ್ಲ. ಸದರಿ ಖರೀದಿ ಪ್ರಕಾರ ಎಮ್ ಆರ್ ನಂ. ಎಚ್ 43 ಮಂಜುರಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಎಮ್ ಆರ್ ನ್ನು ಸಹ ರದ್ದು ಪಡಿಸಲು ನಾವು ಯಾರು ಸಹ ಮೆಲ್ಮನವಿ ಸಲ್ಲಿಸಿಲ್ಲ ಎಂದರೆ ಸಾಕ್ಷಿ ನಮ್ಮ ಕುಟುಂಬದ ಆಸ್ತಿಗಳು ವಾಟ್ನಿ ಆಗಿಲ್ಲ ಹೀಗಾಗಿ ಮೆಲ್ಮನವಿ ಸಲ್ಲಿಸಿಲ್ಲ ಎಂದು ನುಡಿದಿರುತ್ತಾರೆ. ಸದರಿ 4 ಎಕರೆ 3 ಗುಂಟೆ ಆಸ್ತಿ ಯಲ್ಲಿ 10 ನೇ ಪ್ರತಿವಾದಿ ಬೊರವೆಲ ಕೊರೆಸಿ ನೀರಾವರಿ ಮಾಡಿಕೊಂಡು ಜಮಿನನ್ನು ಅಬಿವೃದ್ದಿ ಪಡಿಸಿರುತ್ತಾನೆ ಎಂದರೆ ಸರಿಯಲ್ಲ. ಸದರಿ ಜಮಿನದಲ್ಲಿ 10 ನೇ ಪ್ರತಿವಾದಿ ಮಾವಿನ ಮರಗಳನ್ನು ಬೆಳೆಸಿ ಫಲವತ್ತತೆಯನ್ನಾಗಿ ಮಾಡಿರುತ್ತಾನೆ ಎಂಂದರೆ ಸಾಕ್ಷಿ ಅದರಲ್ಲಿ ಮಾವಿನ ಮರಗಳು ನಾವು ಬೆಳೆಸಿದ್ದೆವೆ ಎಂದು ನುಡಿದಿರುತ್ತಾರೆ. ಸದರಿ ಖರೀದಿ ವಿಷಯ ನಮಗೆ ಎಲ್ಲರಿಗೂ ಗೊತ್ತಿದರು ಸಹ 10 ನೇ ಪ್ರತಿವಾದಿಗೆ ತೊಂದರೆ ಕೊಡಬೇಕೆಂಬ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 10 ನೇ ಪ್ರತಿವಾದಿ ಖರೀದಿಸಿದ ಆಸ್ತಿಯಲ್ಲಿ ನಮಗೆ ಯಾವುದೇ ಹಕ್ಕು ಹಿತಾಸಕ್ತಿ ಇರುವುದಿಲ್ಲ ಎಂದರೆ ಸರಿಯಲ್ಲ.

ದಾವಾ ಆಸ್ತಿಗಳ ಪೈಕಿ ನನ್ನ ತಂದೆ ಹೆಸರಿನಲ್ಲಿ 48 ಎಕರೆ ಆಸ್ತಿಗಳು ನಮ್ಮ ಮತ್ತು ಉಳಿದ ಪ್ರತಿವಾದಿಗಳ ಮನೆತನಕ್ಕೆ ಇರುತ್ತವೆ ಎಂದರೆ ಸರಿ. ಸದರಿ ದಾವಾ ಆಸ್ತಿಗಳ ಪೈಕಿ 48 ಎಕರೆ ಆಸ್ತಿಯಲ್ಲಿ ವಾದಿಯ ಜೊತೆ 6 ನೇ ಪ್ರತಿವಾದಿಗೆ 1/9 ಹಿಸ್ಸೆ ಹಕ್ಕು ಇರುತ್ತದೆ ಎಂದರೆ ಅವರಿಗೆ ಯಾವುದೇ ಹಿಸ್ಸೆ ಇರುವುದಿಲ್ಲ ಎಂದು ನುಡಿದಿರುತ್ತಾರೆ. ಸದರಿ 6 ನೇ

O.S. NO. 16/2018
PW – 2 .
Dated 16-07-2026.

ಪ್ರತಿವಾದಿಯ ಹಿಸ್ಸೆಯ ಪೈಕಿ 10 ನೇ ಪ್ರತಿವಾದಿ ಖರೀದಿಸಿದ ಆಸ್ತಿಯನ್ನು ಬಿಟ್ಟು ಕೊಡಲು ಯಾವುದೇ ತೊಂದರೆ ಇರುವುದಿಲ್ಲ ಎಂದರೆ ಸಾಕ್ಷಿ 6 ನೇ ಪ್ರತಿವಾದಿಗೆ ಯಾವುದೇ ಹಿಸ್ಸಾ ಹಕ್ಕು ಇರುವುದಿಲ್ಲ ಎಂದು ನುಡಿದಿರುತ್ತಾರೆ. 10ನೇ ಪ್ರತಿವಾದಿ ಬೊನಾಪೈಡ ಪರಚೇಜರ ಅಂತಾ ನನಗೆ ಗೊತ್ತಿದ್ದರು ಸಹ ಅವರಿಗೆ ತೊಂದರೆ ಕೊಡಬೇಕೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ – ಇಲ್ಲ.

(ಸಾಕ್ಷಿ ವಿಚಾರಣೆಯನ್ನು ನೆರವೇರಿಸಿದ್ದು , ಸಾಕ್ಷಿ ಹೇಳಿದ ಹೇಳಿಕೆಯನ್ನು ಬೆರಳಚ್ಚುಗಾರರಿಗೆ ಉಕ್ತ ಲೇಖನ ನೀಡಿ , ಅದನ್ನು ಗಣಕಿಕೃತಗೊಳಿಸಿದ ಮೇರೆಗೆ ದಾಖಲಿಸಲಾಯಿತು ).

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು
ಬೈಲಹೊಂಗಲ.